ರೋಗಿಯ ಸಂಬಂಧಿ: ನಿಮ್ಮ ಹಾಸ್ಪಿಟಲ್ ಡೀನ್ ಎಲ್ಲಿದ್ದಾರೆ ಮೊದಲು ಇಲ್ಲಿಗೆ ಕರೆಯಿರಿ.

ನರ್ಸ್: ಯಾಕೆ ಏನಾಯ್ತು?

ರೋಗಿಯ ಸಂಬಂಧಿ: ನಾನು ದೂರು ನೀಡಬೇಕಾಗಿತ್ತು. ನಮ್ಮ ತಾಯಿಗೆ ನೀವು ಬೆಡ್ ಒದಗಿಸಿಲ್ಲ.

ನರ್ಸ್: ಸಾಧ್ಯವಿಲ್ಲ ಸರ್. ಇದ್ದಿದ್ದು ಒಂದೇ ಬೆಡ್ಡು, ಅದರ ಮೇಲೆ ಕೊರೊನಾ ರೋಗಿ ಮಲಗಿದ್ದಾರೆ.

***

ನಿಂಗ: ನಿಜಕ್ಕೂ ಯಾರಿಗೂ ಪ್ರೂವ್ ಮಾಡ್ಲಿಕ್ಕೆ ಆಗದ್ದನ್ನ ಕೊರೊನಾ ಮಾಡ್ತು ಮಾರಾಯಾ.

ಕೆಂಗ: ಅದೇನು ಪ್ರೂವ್ ಮಾಡಿದೆ?

ನಿಂಗ: 'ಸ್ಟುಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್' ಅನ್ನೋದು ಈಗ ಪ್ರೂವ್ ಆಯ್ತು.

***

ನಿಂಗ ಐಸಿಯುದಲ್ಲಿದ್ದ. ಆತನ ಹೆಂಡತಿ ನಿಂಗಿ ಬಂದು ಗಳಗಳ ಅಳತೊಡಗಿದಳು.

'ರೀ, ನೀವು ಹೋದ್ರೆ ನನ್ನ ಗತಿ ಏನ್ರೀ? ಓ, ದೇವ್ರೆ ನನ್ನನ್ನಾದ್ರೂ ಒಯ್ಯ ಬಾರದಿತ್ತಾ' ಎಂದು ಕಣ್ಣೀರು ಸುರಿಸುತ್ತ ಕುಳಿತಳು.

ನಿಂಗ: ಲೇ, ನಾಳೆ ನೀನು ಚೆನ್ನಾಗಿ ಅಲಂಕಾರ ಮಾಡಿಕೊಂಡು, ಹೊಸ ಸೀರೆ, ಲಿಪ್‌ಸ್ಟಿಕ್, ಪೌಡರ್ ಹಚ್ಕೊಂಡು ಬಾ' ಅಂದ.

ನಿಂಗಿ: ಏನ್ರೀ ಇದು ಹುಚ್ಚಾಟ ಇಂಥ ಟೈಮಲ್ಲಿ. ನೀವು ಆಗೋ, ಈಗೋ ಅಂತಿದ್ದೀರಿ ಅಂದ್ಲು ನಿಂಗಿ.

ನಿಂಗ: ಹೌದು ಮಾರಾಯ್ತಿ. ನಾಳೆ ಯಮ ಬಂದು ನಿನ್ನನ್ನು ನೋಡಿದ್ರೆ ನನ್ನನ್ನು ಬಿಟ್ಟು ನಿನ್ನ ಕರ್ಕೊಂಡು ಹೋಗಬಹುದು ಅಂತ ಎಂದ!

***

ನಿಂಗ: ನಾನು ರಿಟೈರ್ ಆಗಿದ್ದಕ್ಕೂ, ಈ ಕೊರೊನಾ ಒಕ್ಕರಿಸಿದ್ದಕ್ಕೂ ಸರಿಹೋಯ್ತು ಮಾರಾಯಾ.

ಕೆಂಗ: ಯಾಕೆ, ಏನಾಯ್ತೀಗ?

ನಿಂಗ: ದಿನಾಲೂ ನನ್ನ ಹೆಂಡತಿ ನೀವೇನ್ರೀ ಮನೇಲೇ ಯಾಕೆ ಕುತ್ಕೊಳ್ತೀರಿ ಹೊರಗೆ ಸುತ್ತಾಡ್ಕೊಂಡು ಬರ್ರಿ ಅಂತಾಳೆ.

ಕೆಂಗ: ಹೊರಗೆ ಕೊರೊನಾ ಇದೆ ಅಂತ ಹೇಳ್ಬೇಕಿತ್ತು.

ನಿಂಗ: ಹೇಳಿದೆ. ಸರಕಾರವೇ ಹೇಳಿಲ್ಲವೇ 'ಕೊರೊನಾ ಭಯ ಬಿಡಿ' ಅಂತ ನೀವ್ಯಾಕೆ ಹೆದರ್ತೀರಿ ಅಂತಾಳೆ.

***

ನಿಂಗ: ನನಗೆ ತುಂಬ ಬೇಜಾರಾಗಿದೆ ಮಾರಾಯಾ. ನಾನು ಪ್ರೀತಿಸಿದ ಹುಡುಗಿ ಕೈಕೊಟ್ಟಳು.

ಕೆಂಗ: ಹೌದಾ, ಏನವಳ ಹೆಸರು?

ನಿಂಗ: ಅದೇ ನೆನಪಾಗ್ತಾ ಇಲ್ಲ.

***

ನಿಂಗ: ನಾನು ಮದುವೆ ಆಗುವ ಹುಡುಗಿಯ ಮನೆಯವರ ಕಡೆಯಿಂದ ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ.




ಕೆಂಗ: ಲೇ, ಮದುವೆ ಆಗ್ತೀನಿ ಅಂದ್ರೂ ಯಾರೂ ನಿನಗೆ ಹೆಣ್ಣು ಕೊಡಲ್ಲ. ಆದರೂ ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ ಅಂತೀಯಲ್ಲ.

***

ಉಪ ಚುನಾವಣೆಯ ಮತ ಎಣಿಕೆ ಕಾರ್ಯ ಆ ದಿನ ಇತ್ತು. ಹೈ ಕಮಾಂಡ್ ಸಂದೇಶವೊಂದನ್ನು ಎಲ್ಲ ರಾಜ್ಯಗಳಿಗೆ ಕಳಿಸಿತು. 'ಕೊರೊನಾ ಅಲೆ ಇರುವುದರಿಂದ ನಮ್ಮ ಪಕ್ಷದ ಕಾರ್ಯಕರ್ತರು ಯಾರೂ ಸಂಭ್ರಮಾಚರಣೆ ಆಚರಿಸಕೂಡದು.' ಈ ಸಂದೇಶ ತಲುಪುವ ಹೊತ್ತಿಗೆ ಎಣಿಕೆ ಕಾರ್ಯ ಮುಗಿದಿತ್ತು. ಸಂದೇಶ ಓದಿದ ನಿಂಗ 'ಸಂಭ್ರಮ ಆಚರಿಸುವುದು ಎಲ್ಲಿಂದ ಬಂತು, ಒಬ್ಬರಾದರೂ ನಮ್ಮ ಪಕ್ಷದಿಂದ ಗೆದ್ದರಲ್ಲವೇ? ಎಂದು ಗೊಣಗಿಕೊಂಡ.

***

ನಿಂಗ: ಕುಡಿತ ಕೆಟ್ಟದ್ದು ಎಂಬುದನ್ನು ನಾನು ಒಪ್ಪುವುದಿಲ್ಲ. ಈಗ ನೋಡು ನನ್ನ ಹೆಂಡತಿ ಕುಡಿದಿದ್ದರಿಂದ ಎಷ್ಟೊಂದು ಚಂದ ಕಾಣಿಸ್ತಾಳೆ.

ಕೆಂಗ: ಅಯ್ಯೋ, ನಿಮ್ಮ ಹೆಂಡತಿ ಕುಡಿದಿದ್ದನ್ನು ನಾನು ನೋಡಿಯೇ ಇಲ್ಲವಲ್ಲ!

ನಿಂಗ: ಕುಡಿದಿರೋದು ಅವಳಲ್ಲ, ನಾನು.

***

ನಿಂಗ: ಈ ಸಲದ ಐಪಿಎಲ್ ಕ್ರಿಕೆಟ್ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಕೆಂಗ: ಕೊರೊನಾ ಅಲೆಯಿಂದ ನೋಡಲು ಅವಕಾಶ ಇಲ್ಲದ್ದರಿಂದ ಯಾವ ಅಭಿಪ್ರಾಯವನ್ನೂ ಹೇಳಲು ಆಗುವುದಿಲ್ಲ.

***

ಇಬ್ಬರು ಬೇಟೆಗಾರರು ಸತ್ತು ಸ್ವರ್ಗದಲ್ಲಿ ಭೇಟಿಯಾದರು. ಅವರಲ್ಲೊಬ್ಬ ಬೇಸರದಿಂದ 'ನಿನ್ನ ಬಳಿ ಬಂದೂಕಿತ್ತಲ್ಲ, ನನ್ನನ್ನು ಹುಲಿ ಕೊಂದರೂ ನೀನೇಕೆ ಗುಂಡು ಹೊಡೆಯಲಿಲ್ಲ?' ಎಂದು ಕೇಳಿದ.

'ಅಯ್ಯೋ, ಅದನ್ನೇನು ಹೇಳುವುದು. ನಾನು ಪಕ್ಷಿಗಳನ್ನು ಹೊಡೆಯಲೆಂದು ಬಂದೂಕು ತಂದಿದ್ದೆ ಹಾಗಾಗಿಯೇ ನಾನೂ ಇಲ್ಲಿಗೇ ಬಂದೆ' ಎಂದು ಮತ್ತೊಬ್ಬ ಹೇಳಿದ.

***

ಹೋಟೆಲ್ ಮ್ಯಾನೇಜರ್‌ಗೆ ಒಬ್ಬ ಗ್ರಾಹಕ 'ಏನ್ರೀ ನನ್ನ ಕೊಠಡಿಯ ಒಂದು ಗೋಡೆ ಎಷ್ಟೊಂದು ತೆಳುವಾಗಿದೆಯೆಂದರೆ ಅದರ ಮೂಲಕ ಹೊರಗೆ ನೋಡಬಹುದು.' ಎಂದು ದೂರಿದ.

'ರೀ, ಅದು ನಿಮ್ಮ ಕೊಠಡಿಯ ಗೋಡೆಯಲ್ಲ ಕಿಟಕಿ' ಎಂದ ಮ್ಯಾನೇಜರ್.

***

ನಿಂಗನ ಅವ್ವ: ಯಾಕ್ಲಾ ಯಾರಾದ್ರೂ ರಾಜಕಾರಣಿ ಸತ್ರಾ? ರಜಾ ಯಾಕೆ ಕೊಟ್ರು?

ನಿಂಗ: ಅವ್ವ, ನಾವು ಸಾಯಬಾರ್ದು ಅಂತ ಈಗ ಶಾಲೆಗೆ ರಜಾ ಕೊಟ್ಟಿದ್ದಾರೆ.

***

ಬಿಇಓ ಶಾಲೆಗೆ ಭೇಟಿ ನೀಡಿದರು. ಶಾಲಾ ಶಿಕ್ಷಕಿಯೊಬ್ಬಳು ತರಗತಿಯಲ್ಲಿ ನಿದ್ದೆ ಮಾಡುತ್ತಿದ್ದಳು. ಹುಡುಗರು ದಾಂದಲೆ ಮಾಡುತ್ತಿದ್ದರು. ಇದನ್ನು ನೋಡಿ ಕೆಂಡಾಮಂಡಲವಾದ ಅಧಿಕಾರಿ ಜೊತೆಗಿದ್ದ ಮುಖ್ಯ ಶಿಕ್ಷಕರಿಗೆ 'ಏನ್ರೀ, ಏನ್ಮಾಡ್ತಿದ್ದೀರಿ. ಇಲ್ಲಿ ನೋಡಿ ನಿಮ್ಮ ಶಿಕ್ಷಕಿ ನಿದ್ದೆ ಮಾಡ್ತಿದ್ದಾರೆ? ಅವರನ್ನು ಈಗ ಅಮಾನತ್ತು ಮಾಡ್ತೀನಿ' ಅಂದ್ರು.

ತಕ್ಷಣ ಎಚ್ಚರವಾದ ಶಿಕ್ಷಕಿ ಮಕ್ಕಳತ್ತ ತಿರುಗಿ 'ಮಕ್ಕಳೇ ಈಗ ನಿಮಗೆ ಗೊತ್ತಾಯಿತಾ? ಹೊತ್ತಲ್ಲದ ಹೊತ್ತಲ್ಲಿ ನಿದ್ದೆ ಮಾಡುವುದರಿಂದ ಆಗೋ ಪರಿಣಾಮವೇನು ಅಂತ' ಎಂದು ವಿವರಿಸಿದರು.

—ಸಂಗ್ರಹ: ಪ್ರಕಾಶ ಎಸ್.ಮನ್ನಂಗಿ